†ಶ್ರೀ ಕೆ. ಎಚ್. ಪಾಟೀಲ್.—ಕೊಂಡು ಕೊಂಡ ತಾರೀಕಿನಿಂದ ಖರೀದಿಯಾಗುವ ತಾರೀಕಿನ ವರೆಗೆ ಎಷ್ಟು ಸಮಯವಾಗುತ್ತದೋ ಅಷ್ಟು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಇದರಲ್ಲಿ ಆದಾಯ ಹೆಚ್ಚಾಗಿ ಬರುತ್ತಿದೆ ಎಂದು ಹೇಳುತ್ತಿದ್ದೀರಿ. ಆದರೆ 1968–69 ರಲ್ಲಿದ್ದುದಕ್ಕಿಂತ 1970–71ರಲ್ಲಿ ಆದಾಯವು ಬಹಳ ಇಳಿಮುಖವಾಗುತ್ತಾ ಇದೆ. ಹೀಗೆ ಮುಂದೆಯೂ ಇಳಿಮುಖವಾಗುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಲಾಭ ಅಷ್ಟು ಸಹಿತ ಆಗಬಾರದು ಲಾಭಕ್ಕಿಂತ ಹೆಚ್ಚು ಸರ್ವಿಸ್ ಮೈಂಡೆಡ್ ಆಗಬೇಕೆಂದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನ ಉದ್ದೇಶ. ಅದಕ್ಕೆ ಹೆಚ್ಚು ಸರ್ವಿಸ್ ಸೆಂಟರ್ಸ್ ತೆಗೆಯಿರಿ ಎಂದು ಹೇಳುತ್ತಿದ್ದೇವೆ. ಇದರಲ್ಲಿ ಸ್ವಲ್ಪ ಲಾಭ ಕಮ್ಮಿಯಾದರೂ ಅಡ್ಡಿಯಿಲ್ಲ. ಆಗ್ರೋ ಇಂಡಸ್ಟ್ರಿಸ್ ಲಾಭದ ದೃಷ್ಟಿಯಿಂದ ಇರುವುದಲ್ಲ ಅದು ಸರ್ವಿಸ್ ಮೈಂಡೆಡ್ ದೃಷ್ಟಿಯಿಂದ ಇರುವುದು.

ಶ್ರೀ ಟಿ. ಎಂ. ಮಂಜುನಾಥ.—ತಮ್ಮ ಸಂಸ್ಥೆಯ ಮುಖಾಂತರ ಟ್ರಾಕ್ಟರುಗಳನ್ನು ರೈತರಿಗೆ ಕೊಡಿಸಿಕೊಡುವಾಗ ಟ್ರಾಕ್ಟರ್ ಬೆಲೆ ನಿಗದಿಯಾಗುವುದಕ್ಕೆ ಮುಂಚೆ ಒಂದು 40—50 ಸಾವಿರ ರೂಪಾಯಿಗಳನ್ನು ಕಟ್ಟಿಸಿಕೊಂಡಿರುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಹೆಚ್ಚಾದ ದುಡ್ಡನ್ನು ವಾಪಸ್ಸು ಕೊಡುವುದಕ್ಕೆ ಅದೇಶ ನೀಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ರೈತರು 2 ಸಾವಿರ ರೂಪಾಯಿ ತುಂಬಬೇಕೆಂಬುದು ನನಗೆ ಗೊತ್ತು. ಅಡ್ವಾನ್ಸ್ ತುಂಬುವುದು ಕೂಡ ಅರಾಟ್‌ಮೆಂಟ್ ಆರ್ಡರ್ ಬಂದಾಗ ಮಾತ್ರವೆಂದು ತಿಳಿಯುತ್ತೇನೆ. ರೈತರು ಅವರಾಗಿಯೇ ತುಂಬಿದರೆ ಅದನ್ನು ಬೇಡ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಈಗ ಸರ್ವಿಸ್ ಮೈಂಡೆಡ್ ಇರಬೇಕೆಂದು ಹೇಳುತ್ತೀರಿ ನಿಜ. ಈ ಸಂಸ್ಥೆಯವರು ಹೊರಗಡೆಯಿಂದ ಬೇಕಾದಷ್ಟು ಸಾಲದ ರೂಪದಲ್ಲಿ ಹಣ ತೆಗೆದುಕೊಂಡಿರತಕ್ಕದ್ದು ತಮಗೆ ಗೊತ್ತಿದೆಯೇ ? ಹಾಗೆ ಸಾಲ ತೆಗೆದುಕೊಂಡಾಗ ಅದಕ್ಕೆ ಲಾಭ ಬರಬೇಡವೇ ? ಆದ್ದರಿಂದ ಇದರಲ್ಲಿ ಲಾಭ ಹಾಗೂ ಸರ್ವಿಸ್'—ಇವೆರಡೂ ಇರುವಂತೆ ಆದೇಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಇದರ ಉದ್ದೇಶ ಲಾಭದ ಕಡೆಗೆ ಹೆಚ್ಚು ಅಲ್ಲ. ಆದರೆ ಸರ್ವಿಸ್ ಮುಖ್ಯ. ಜನರಿಗೆ ಇದರಿಂದ ಹೆಚ್ಚಿನ ಸರ್ವಿಸ್ ದೊರೆಯಬೇಕಾಗಿದೆ. ಸರ್ವಿಸ್ ಕಡೆಗೆ ಹೆಚ್ಚು ಅವಕಾಶ ಕೊಡಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಫರ್ಗ್ಯುಸನ್‌ನಿಂದ ಈ ಟ್ರಾಕ್ಟರ್ ಟಿ—135ಯನ್ನು ಒದಗಿಸುತ್ತಿದ್ದಾರೆ. ರೈತರು ಅದರ ಹಣವನ್ನು ತುಂಬಿ ಈಗಾಗಲೇ ತೆಗೆದುಕೊಂಡಿರುತ್ತಾರೆ. ಆದರೆ ಅವರು ಹೆಚ್ಚಾಗಿ ಕೊಟ್ಟಿರತಕ್ಕಂತಹ ಹಣವನ್ನು ವಾಪಸ್ಸು ಕೊಡಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಇದು ಈ ಪ್ರಶ್ನೆಗೆ ಸಂಬಂಧವಿಲ್ಲ. ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯವನ್ನು ತೀವ್ರವಾಗಿ ವಿಚಾರಮಾಡಿ ಅದರಲ್ಲಿ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ.

Harijan and Girijan Housing Co-operative Societies in Bellary District

182. Sri B. SATHYANARAYANA SINGH (Hospet).—

Will the Minister for Co-operation be pleased to state:—

(*a*) whether it is a fact that in Bellary District most of the Harijans and Girijans Housing Co-operative Societies are not sanctioning loans to the fresh applicants ;

† Indicates that the remarks or speeches have not been revised by the member concerned.

(*b*) whether it has come to the notice of Government that fresh applicants are not being entertained on the plea that the old loanees have not paid instalments of their borrowing ;

(*c*) whether Government would consider changing this system of working in these co-operative societies so as to enable the fresh applicants to get loans ;

(*d*) whether Government has a proposal before it to introduce the system of granting individual loans to the Scheduled Caste/Scheduled Tribe people where the Harijans and Girijans Housing Societies are not functioning properly;

(*e*) whether Government has any proposal to allot ready built houses constructed by the Housing Board to the Harijan and Girijan when such housing societies are not functioning properly ?

Sri A. SHANKARA ALVA (Minister for Co-operation).—

(*a*) As per the circular issued by the Mysore State Scheduled Castes and Scheduled Tribes Co-operative Housing Corporation the following two conditions have been laid down for consideration while sanctioning loans to new members ;

(1) The societies should have completed more than 50 per cent of the houses already sanctioned.

(2) The societies should have repaid more than 40 per cent of the loan instalments due by the society to the Corporation as on the date of the receipt of application by the Corporation.

As the societies in question have not fulfilled these conditions loans are not being sanctioned to fresh applicants.

(*b*) Yes, such of the societies whose percentage of recovery of overdues falls short of the prescribed limit of 40 per cent are not entertaining fresh applications.

(*c*) It is not advisable to relax the conditions referred to at (*a*) above since the financier *i.e.* the LIC of India is insisting on reducing the overdues to 8 per cent for advancing fresh loans to the Scheduled Castes and Scheduled Tribes Co-operative Housing Corporation.

(*d*) No.

The present system is considered better as loan is channelised through well organised primary co-operative institutions.

(*e*) No.

Under the scheme the loanees have to make use of the locally available material including their own labour which will reduce the cost of construction. If the house is entrusted to the Housing Board the cost of construction will be high and will not be within the repaying capacity of the borrowers.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಹರಿಜನ—ಗಿರಿಜನ ಸೊಸೈಟಿಗಳ ಕೆಲಸ ಮಾಡುತ್ತಾ ಇಲ್ಲ ?

† ಶ್ರಿ ಎ. ಶಂಕರ ಆಳ್ವ.—ಯಾವ ಸೊಸೈಟಿಗಳಲ್ಲಿ ಸರಿಯಾಗಿ ಕೊಟ್ಟ ಸಾಲ ರಿಕವರಿಯಾಗಿಲ್ಲವೋ ಅಲ್ಲಿ ಹೊಸಬರಿಗೆ ಸಾಲ ಕೊಡುವುದಕ್ಕೆ ಸಾಧ್ಯವಾಗಲಿಲ್ಲ.

Sri J P. SARWESH. May I know what further fresh loan the Housing Corporation got from the L. I. C. ?

Sri A. SHANKARA ALVA.—The difficulty is, the State Housing Corporation want 40 per cent recovery. But, as a matter of fact in these societies only 11 per cent recovery is made. So fresh loans cannot be given.

Sri J. P. SARWESH.—I want to know what fresh loan this Corporation is getting from the L. I. C. ?

Sri A. SHANKARA ALVA.—I want notice for that.

ಶ್ರೀ ಆರ್. ಎಸ್. ಪಾಟೀಲ್.—40 ಪರ್‌ಸೆಂಟ್ ರಿಕವರಿ ಮಾಡಿದರೆ ಮಾತ್ರ ಸಾಲ ಕೊಡುತ್ತೀರಿ ಹಾಗೆ ಕೊಡದಿದ್ದರೆ ಹೊಸಬರಿಗೆ ತೆಗೆದುಕೊಳ್ಳತಕ್ಕಂತಹ ಪರಿಸ್ಥಿತಿ ಎಲ್ಲಿದೆ ?

ಶ್ರೀ ಎ. ಶಂಕರ ಆಳ್ವ.—ಈಗಿನ ರೂಲ್ಸ್ ಪ್ರಕಾರ 40 ಪರ್‌ಸೆಂಟ್ ರಿಕವರಿ ಆದರೆ ಮಾತ್ರ ಹೊಸಬರಿಗೆ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಇಲ್ಲ.

ಶ್ರೀ ಕೆ. ಬಿ. ಕೋಳಿವಾಡ್.—ಈ ಸೊಸೈಟಿಗಳಲ್ಲಿ ಹಣ ಸೇಕಡ ಒಂದರಷ್ಟೂ ಸಹ ವಸೂಲಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಈ ಯೋಜನೆಯ ಪ್ರಕಾರ ಇದು ಬರುವುದಿಲ್ಲ.

ಶ್ರೀ ಕೆ. ಬಿ. ಕೋಳಿವಾಡ್.—ಹಿಂದುಳಿದ ಸೊಸೈಟಿಗಳಿಂದ ಇದರ ರಿಕವರಿಗೆ ಏರ್ಪಾಡು ಮಾಡುವುದಕ್ಕಿಂತ ಪೂರ್ವವಾಗಿ ರಾಣಿಬೆನ್ನೂರ್ ಸೊಸೈಟಿಯವರು ಏನಾದರೂ ಇಷ್ಟು ಸಾಲ ವಸೂಲುಮಾಡಿಕೊಡುತ್ತೇವೆಂದು ತಿಳಿಸಿದ್ದಾರೆಯೇ ?

ಶ್ರೀ ಎ. ಶಂಕರ ಆಳ್ವ.—ಎಷ್ಟು ಕರೆಕ್ಟ್ ಮಾಡುತ್ತಾರೋ ಅದೂ ಕೂಡ ನನಗೆ ಈಗ ಗೊತ್ತಿಲ್ಲ.

ಶ್ರೀ ಜಿ. ವಿ. ಕಕ್ಕಿಲಾಯ.—ಕೆಲವರು ಸಾಲವನ್ನು ಪೂರ್ತಿಯಾಗಿ ಕೊಡುತ್ತಾರೆ. ಕೆಲವು ಸೊಸೈಟಿಗಳಿಂದ ಸೇಕಡ 40ರಷ್ಟೂ ಕೂಡ ಬರುವುದಿಲ್ಲ. ಸಾಲ ವಾಪಸ್ಸು ಕೊಡುವವರಿಗೆ ಮತ್ತೆ ಸಾಲ ಕೊಡುವುದಕ್ಕೆ ವ್ಯವಸ್ಥೆಮಾಡಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ಸೊಸೈಟಿಯಲ್ಲಿ ಶೇಕಡ 40ರಷ್ಟು ರಿಕವರ್ ಆಗದಿದ್ದರೆ ರೂಲ್ಸ್ ಪ್ರಕಾರ ಮತ್ತೆ ಸಾಲ ಕೊಡುವುದಕ್ಕಾಗುವುದಿಲ್ಲ.

Sri J. P. SARWESH.—Is there any proposal before the Government to demolish or dissolve this Corporation ?

Sri A. SHANKARA ALVA.—Not just at present.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಬಳ್ಳಾರಿಯಲ್ಲಿ ಸೇಕಡ 40ಕ್ಕಿಂತ ಹೆಚ್ಚು ಸಾಲದ ಹಣದ ಕಂತುಗಳನ್ನು ಮರುಪಾವತಿ ಮಾಡಿಲ್ಲವೆಂದು ಹೇಳಿದ್ದೀರಿ. ಅಂದಮೇಲೆ ಎಷ್ಟು ಈವರೆಗೆ ವಸೂಲಾಗಿದೆ ?

ಶ್ರೀ ಎ. ಶಂಕರ ಆಳ್ವ.—ಅಲ್ಲಿನ ಸೊಸೈಟಿಗಳಿಗೆ 31 ಲಕ್ಷದ 75 ಸಾವಿರ ರೂಪಾಯಿಗಳವರೆಗೆ ಸಾಲವನ್ನು ಕೊಟ್ಟಿದ್ದಾರೆ. ಅದರಲ್ಲಿ 65 ಸಾವಿರ ರೂಪಾಯಿಗಳು ಮಾತ್ರ ವಸೂಲಾಗಿದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಅಲ್ಲಿನ ಸೊಸೈಟಿಗಳ ಸಂಖ್ಯೆ ಎಷ್ಟು ? ಅವೆಲ್ಲವೂ ಸೇಕಡ 40ರಷ್ಟು ಕಂತುಗಳನ್ನು ಕೊಟ್ಟಿವೆಯೇ ?

ಶ್ರೀ ಎ. ಶಂಕರ ಆಳ್ವ.—ಯಾವುದೂ ಕೊಟ್ಟಿಲ್ಲ.

Sri DIGAMBAR RAO BALWANT RAO.—In view of the fact that the Societies have not paid 40 per cent of the loan, has it come to the

notice of the Government that the Harijans and Girijans housing Co-operative Societies cannot have any housing programmes and there is bottleneck to grant houses to them ?

Sri A. SHANKARA ALVA.—As a matter of fact, on account of the default of these Societies, it has become difficult for fresh people to take loans. Therefore, a new method has to be found.

ಶ್ರೀ ಬಾಪುಗೌಡ ರಾಯಪ್ಪ.—(ಈ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ನಧ್ಯ ದಲ್ಲಿ ಸಹಕಾರ ಶಾಖೆಗಳಿಗೆ ಕೊಡುವ ಹೆಚ್ಚು ಸಾಲದ ಪ್ರಮಾಣ ದುರ್ಬ್ಯಯವಾಗುತ್ತಿದೆ. ಆದ್ದರಿಂದ ಹೌಸಿಂಗ್ ಬೋರ್ಡ್ ಮುಖಾಂತರ ಮನೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಈ ಪ್ರಶ್ನೆ ಇರುವುದು ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟದ್ದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗಿನ ಷರತ್ತು ಪ್ರಕಾರ ಸೇಕಡ 40 ರಷ್ಟು ಸಹ ನಿರ್ಗತಿಕರು ಕೊಡುವುದಕ್ಕಾಗುವುದಿಲ್ಲ. ಅದನ್ನು ಸರ್ಕಾರ ಗಮನಿಸಿದೆಯೇ ? ಈಗ ಬೇರೆ ಯವರಿಗೆ ಸಾಲ ದೊರೆಯದಂತಿದೆ. ಅಂತಹ ಷರತ್ತು ಇದೆ. ಆದ್ದರಿಂದ ಬೇರೆಯವರಿಗೂ ಸಹ ಸಾಲ ಕೊಡುವ ರೀತಿಯಲ್ಲಿ ಯಾವುದಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಆದನ್ನೂ ಮಾಡುತ್ತೇವೆ.

Sri K. PRABHAKAR.—Will the Government be pleased to state the line of thinking of the Government to improve such Societies ?

Sri A. SHANKARA ALVA.—We have to think over it.

Sri K. PRABHAKAR.—Under the cirumstances, will the Goverment be pleased to state what steps they have taken to improve the functioning of the Societies ?

Sri A. SHANKARA ALVA.—As a mater of fact, I stated that in this District a sum of Rs. 31,75,500 has been given as loan for 1,319 houses : out of which a sum of only Rs. 65,129 has been recovered. That means 11 per cent of the loan has been recovered. Under the Rules, no fresh loans can be given to any new members. To see that there is no default on the part of these Societies, a new method has to be found.

ಶ್ರೀ ಬಿ. ನತ್ಯನಾರಾಯಣ ಸಿಂಗ್.—ಈಗತಾನೇ ಯಾವ ಸೊಸೈಟಿಯಲ್ಲಿಯೂ ಹಣವನ್ನು ವಸೂಲುಮಾಡಿ ಕೊಟ್ಟಿಲ್ಲವೆಂದು ಹೇಳಿದಿರಿ. ಆದ್ದರಿಂದ ಹೌಸಿಂಗ್ ಬೋರ್ಡಿನಿಂದ ಪೈಯುಕ್ತಿಕ ವಾಗಿ ಸಾಲ ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಹೌಸಿಂಗ್ ಬೋರ್ಡಿನಿಂದ ಲೋನ್ ಕೊಟ್ಟರೂ ಮನೆ ಕಟ್ಟುವ ಖರ್ಚು ಜಾಸ್ತಿಯಾಗುತ್ತಿದೆ. ಆದ್ದರಿಂದ ಆ ರೀತಿಯಾಗಿ ಸಾಲ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

Scarcity of drinking water at Gundalgere and Arkaree

189. Sri RAJA PID NAIK (Shorapur). —

Will the Minister for Community Development and Socil Welfare be pleased to state :—

(*a*) whether the Government is aware of the acute scarcity of dinking water in the villages of Gundalgere and Arkaree in Shorapur taluk, Gulbarga District ;